ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿನ ಧಾರ್ಮಿಕ ಸಂಸ್ಥೆಗಳ ದುರಸ್ತಿ/ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನದ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಸಾಮಾನ್ಯ ಅನುದಾನದ ಅಡಿ						
ತಾಲ್ಲೂಕು ಹೆಸರು	2002–2003		2003–2004		2004–2005	
	ಸಂಸ್ಥೆಗಳ ಸಂಖ್ಯೆ	ಮೊಬಲಗು	ಸಂಸ್ಥೆಗಳ ಸಂಖ್ಯೆ	ಮೊಬಲಗು	ಸಂಸ್ಥೆಗಳ ಸಂಖ್ಯೆ	ಮೊಬಲಗು
ಮಡಿಕೇರಿ	20	1,09,000	22	18,65,000	2	1,00,000
ವಿರಾಜಪೇಟೆ	42	14,30,000	43	13,20,000	1	1,00,000
ಸೋಮವಾರ ಪೇಟೆ	7	3,45,000	17	4,20,000	2	1,50,000
ಒಟ್ಟು	**69**	**1,26,75,000**	**82**	**36,05,000**	**5**	**3,50,000**
ಆರಾಧನಾ ಯೋಜನೆಯಡಿ ಅನುದಾನ						
ಮಡಿಕೇರಿ	–	2,05,356	–	53,571	–	2,82,000
ವಿರಾಜಪೇಟೆ	–	2,05,356	–	53,571	–	2,82,000
ಸೋಮವಾರ ಪೇಟೆ	–	2,05,356	–	53,571	–	2,82,000
ಒಟ್ಟು		**6,16,068**		**1,60,713**		**846000**

ಈ) ಕೊಡಗು ಜಿಲ್ಲೆಯಲ್ಲಿ ಈ ಇಲಾಖೆಯಲ್ಲಿ ವ್ಯಾಪ್ತಿಗೆ ಬರುವ ಪ್ರಮುಖ ದೇವಾಲಯಗಳು ಆಡಳಿತ ವ್ಯಾಪ್ತಿಗೆ ಬಾರದೇ ಇರುವುದರಿಂದ, ಅವುಗಳ ವಿವರ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಉ) ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ದೇವಾಲಯಗಳ ಬಗ್ಗೆ ದೂರುಗಳು ಬಂದಲ್ಲಿ ನೂತನ ಕಾಯಿದೆಯ ಸೆಕ್ಷನ್ 42,43 ರಲ್ಲಿ ಅವಕಾಶ ಇರುವುದರಿಂದ, ಸದರೀ ಕಾಯಿದೆ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

2059 (2607) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ಆಗಾಗ್ಗೆ ವಿದ್ಯುತ್ ಕಡಿತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ವಿದ್ಯುತ್ ಕೊರತೆಯನ್ನು ನೀಗಿಸಿ ಜಿಲ್ಲೆಗೆ ತಡೆರಹಿತ ವಿದ್ಯುತ್ ಸಂಪರ್ಕ ಕಲ್ಪಿಸಲು ಸರಕಾರ ಏನಾದರೂ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ವಿದ್ಯುತ್ ಕಡಿತ ಆಗುತ್ತಿಲ್ಲ. ಆದರೆ ವಿದ್ಯುತ್ ಮಾರ್ಗಗಳು ದಟ್ಟವಾದ ಅರಣ್ಯ ಹಾಗೂ ಬೆಟ್ಟಗುಡ್ಡಗಳ ಮುಖಾಂತರ ಹಾದು ಹೋಗಿರುವುದರಿಂದ ಕೆಲವೊಮ್ಮೆ ತಾಂತ್ರಿಕ ತೊಂದರೆಯಿಂದ ವಿದ್ಯುತ್ ಅಡಚಣೆ ಆಗುವ ಸಂಭವಗಳು ಇರುತ್ತವೆ.

ಕೊಡಗು ಜಿಲ್ಲೆಯಲ್ಲಿ ಕಂದಾಯ ವಸೂಲಾತಿಯು ಶೇಕಡ 95 ರಷ್ಟು ಇರುವ ಕಾರಣ ಸ್ಥಳೀಯ ಇತಿ-ಮಿತಿಗಳಿಗೆ ಒಳಪಟ್ಟು ಜಿಲ್ಲೆಯಾದ್ಯಂತ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಆ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಇನ್ನೂ ಉತ್ತಮಗೊಳಿಸಲು ಸುಮಾರು 1816 ಲಕ್ಷ ರೂ.ಗಳ ಷಂದಾಜು ವೆಚ್ಚದಲ್ಲಿ ಮಡಿಕೇರಿ, ವಿರಾಜಪೇಟೆ ಮತ್ತು ಶುಂಠಿಕೊಪ್ಪಗಳಲ್ಲಿ 66 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ, ಕುಶಾಲನಗರದಿಂದ ಶುಂಠಿಕೊಪ್ಪ ಮಾರ್ಗವಾಗಿ ಮಡಿಕೇರಿಗೆ 66 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಕ್ರಮಗಳಿಂದ ಕೊಡಗು ಜಿಲ್ಲೆಯ 33 ಕೆ.ವಿ. ವಿದ್ಯುತ್ ವ್ಯವಸ್ಥೆಯಲ್ಲಿ ಹಾಲಿ ಇರುವ ತಾಂತ್ರಿಕ ಇತಿಮಿತಿಗಳು ನಿವಾರಣೆಗೊಳ್ಳುವುದರಿಂದ, ಕೊಡಗು ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜಿನಲ್ಲಿ ಗಣನೀಯ ಪ್ರಮಾಣದಲ್ಲಿ ಸುಧಾರಣೆ ಉಂಟಾಗಲಿದೆ.

2060 (2608) Sri Bopaiah K.G. (Madikeri) Will the Minister for Public Works and Energy be pleased to State?

a) How many Villages have been provided with the facility of electricity by the Central Government under Rural Electrification Scheme in Madikeri Assembly Constituency;

b) The amount year marked;

c) The reason for dropping of this Scheme;

d) In case, this scheme is dropped, whether any alternative scheme has been formulated for providing electricity; if such a scheme has been taken up, what is the present status of the scheme?

H.D. Revanna (Minister for Public Works and Energy)

a) All villages in Madikeri Assembly Constituency have been electrified.